ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ: 69/2024**

ಪ್ರ.ವ.ಬೋ.ತಾಃ 24-07-2025

ಚಾಸಾಃ 1 ಫ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮಿದೇವಮ್ಮ |
| ತಂದೆ/ಗಂಡನ ಹೆಸರು | ಸೀಗಣ್ಣ |
| ವಯಸ್ಸು | 70 ವರ್ಷ |
| ವೃತ್ತಿ | ಮನೆಕೆಲಸ |
| ವಾಸ | ಲಕ್ಕಿಹಟ್ಟಿ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಮೃತ ನಿಜಲಿಂಗಪ್ಪ ನನ್ನ ಮಗ. ಕಳೆದ ಒಂದು ವರ್ಷದ ಹಿಂದೆ ನನ್ನ ಮಗ ನಿಜಲಿಂಗಪ್ಪ ಜೋಳ ತರಲು ನಮ್ಮ ಊರಿನಿಂದ ಮಧಗಿರಿಗೆ ಬೈಕ್‌ನ ಮೂಲಕ ಹೋಗಿದ್ದು ವಾಪ್ಪಸ್ಸು ಊರಿಗೆ ಬರುತ್ತಿರುವಾಗ ಹೊಸಕೆರೆ ಗ್ರಾಮದ ಬಳಿ ಒಂದು ಬುಲೇರೋ ವಾಹನ ಬಂದು ನನ್ನ ಮಗನಿಗೆ ಡಿಕ್ಕಿ ಪಡಿಸಿತು. ಈ ವಿಚಾರವನ್ನು ಚಾಸಾ.2 ರವರು ನನಗೆ ತಿಳಿಸಿದರು. ಆ ನಂತರ ನನ್ನ ಮಗನನ್ನು ಚಿಕಿತ್ಸೆಗಾಗಿ ಮಧಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ನನ್ನ ಮಗ ಮೃತ ಪಟ್ಟರು. ಈ ಬಗ್ಗೆ ನಾನು ಮಿಡಿಗೇಶಿ ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರು ನೋಡಿ ಗುರುತಿಸಿದ್ದು ಅದನ್ನು

ನಿಪಿ.1 ಎಂದು ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈ ಅಘಾತವು ಬುಲೇರೋ ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ.

**ಪಾಟೀ ಸವಾಲುಃ– ಆರೋಪಿತರ ಪರವಾಗಿ ಶ್ರೀ. ಜಿ.ಎಸ್.ಆರ್ ವಕೀಲರಿಂದಃ–**

ಆ ದಿನ ದೂರೂ ನೀಡಲು ನಾನು ಒಬ್ಬಳೇ ಪೊಲೀಸ್ ಠಾಣೆಗೆ ಹೋಗಿದ್ದೆನು. ಆ ನಂತರ ಚಾಸಾ 2 ಮತ್ತು 3 ರವರು ಸಹ ಠಾಣೆಗೆ ಬಂದರು. ಆ ದೂರನ್ನು ಪೊಲೀಸರೆ ಬರದು ಸಹಿ ಪಡೆದರು. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈ ಅಘಾತವು ಬುಲೇರೋ ವಾಹಾನದ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ನನ್ನ ಮಗನೇ ಬೈಕನ್ನು ಅಡ್ಡಾ ದಿಡ್ಡಿಯಾಗಿ ಚಲಾಯಿಸಿ ಬುಲೇರೋ ವಾಹನಕ್ಕೆ ಡಿಕ್ಕಿ ಪಡಿಸಿದ ಕಾರಣ ಈ ಅಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಅಘಾತಕ್ಕೆ ಸಂಬಂಧಪಟ್ಟಂತೆ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

Sd/-
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ